## ಪಾರ್ಶ್ವವಾಯುಗೆ ಅರಿಶಿಣ ರಾಮ ಬಾಣ

ಕೆಲವೊಂದು ಕಾಯಿಲೆಗಳಿಗೆ ಅಡುಗೆ ಮನೆಯೇ ಔಷಧಾಲಯ. ಅಂಥ ಕಾಯಿಲೆಗಳ ಪಟ್ಟಿಗೆ ಇದೀಗ ಪಾರ್ಶ್ವವಾಯು ಕೂಡಾ ಸೇರ್ಪಡೆಗೊಂಡಿದೆ. ಪಾರ್ಶ್ವವಾಯು ಆದ ತಕ್ಷಣ ಹಾನಿಗೊಳಗಾಗುವ ದೇಹದ ಭಾಗಗಳಿಗೆ ಅರಿಶಿಣ ರಾಮಬಾಣವಂತೆ.

ಲಾಸ್ಏಂಜಲೀಸ್‌ನಲ್ಲಿರುವ ಸೆಡಾರ್ಸ್ ಸಿನಾಯ್ ಆರೋಗ್ಯ ಕೇಂದ್ರದ ವಿಜ್ಞಾನಿಗಳು ಅರಿಶಿಣದಿಂದ ಔಷಧ ತಯಾರಿಸಿ ಮೊಲದ ಮೇಲೆ ಪರೀಕ್ಷಿಸಿ ಯಶಸ್ವಿಯಾದ ನಂತರ ಇದೀಗ ಮನುಷ್ಯರ ಮೇಲೆ ಪ್ರಯೋಗ ನಡೆಸಲು ಮುಂದಾಗಿದ್ದಾರೆ.

ಪಾರ್ಶ್ವವಾಯು ಆದ ತಕ್ಷಣ ದೇಹದ ಒಂದು ಭಾಗ ಸಂಪೂರ್ಣವಾಗಿ ತನ್ನ ಕಾರ್ಯವನ್ನು ಸ್ಥಗಿತಗೊಳಿಸುತ್ತದೆ. ಮಾಂಸಖಂಡಗಳು ಸಂಕುಚಿಗೊಳ್ಳುತ್ತವೆ. ಇಂಥ ಸಂದರ್ಭದಲ್ಲಿ ಅರಿಶಿಣ ಬಳಸುವುದರಿಂದ ರಕ್ತದ ಮೂಲಕ ಮೆದುಳಿಗೆ ಹೋಗಬಹುದಾದ ಕೆಲ ವಿಷದ ಕಣಗಳನ್ನು ತಡೆಯಬಹುದು.

ಇಷ್ಟೇ ಅಲ್ಲದೆ, 'ಅಲೋಪತಿಯಂಥ ಔಷಧ ಪ್ರಕಾರದಲ್ಲೂ ಇದೇ ಮೊದಲ ಬಾರಿಗೆ ಅರಿಶಿಣ ಬಳಸಲಾಗುತ್ತಿದ್ದು, ಪಾರ್ಶ್ವವಾಯು ಪೀಡಿತರ ದೇಹದಲ್ಲಿ ಹೊಸ ಜೀವಕೋಶಗಳು ಹುಟ್ಟಲು ಹಾಗೂ ಇರುವ ಜೀವಕೋಶಗಳು ಸಾಯದಂತೆ ಕಾಪಾಡಲು ಅರಿಶಿಣ ನೆರವಾಗಿದೆ' ಎಂದು ಡಾ.ಶರ್ಲಿನ್ ಅಹ್ಮದ್ ಹೇಳುತ್ತಾರೆ.

ಪಾರ್ಶ್ವವಾಯು ಪೀಡಿತರಿಗೆ ಮೊದಲು ಮೆದುಳಿನ ಜೀವಕೋಶಗಳು ಸಾಯುತ್ತವೆ. ಇದರಿಂದ ದೇಹದ ಒಂದು ಭಾಗಕ್ಕೆ ರಕ್ತ ಪರಿಚಲನೆ ನಿಂತು ಆ ಭಾಗದ ಅಂಗಾಂಗಗಳಿಗೆ ಹಾನಿಯಾಗುತ್ತದೆ. ಇದರಿಂದ ಅಂಗವೈಕಲ್ಯತೆಯೂ ಸಂಭವಿಸಬಹುದು. ಆದರೆ ಅರಿಶಿಣದಿಂದ ತಯಾರಾದ ಸಿಎನ್‌ಬಿ-001 ಔಷಧ ಹಾನಿಗೊಳಗಾದ ಮೆದುಳಿನ ಜೀವಕೋಶಕ್ಕೆ ಮರುಜೀವ ನೀಡುವುದರ ಜತೆಗೆ ಹಾನಿಗೊಳಗಾದ ದೇಹದ ಭಾಗಗಳೊಂದಿಗೆ ಸಂಪರ್ಕ ಕಲ್ಪಿಸುವ ತುರ್ತು ಸೇತುವೆಯಾಗಲಿದೆ.

ಈ ಔಷಧವನ್ನು ಮೊಲದ ಮೇಲೆ ಪ್ರಯೋಗಿಸಿದಾಗ ಯಾವುದೇ ಅಡ್ಡ ಪರಿಣಾಮ ಉಂಟಾಗಿಲ್ಲ. ಆದರೆ ಮನುಷ್ಯರ ಮೇಲೆ ಪ್ರಯೋಗ ನಡೆಸಿ ಯಶಸ್ವಿಯಾಗುವುದೇ ನಿಜವಾದ ಸವಾಲು ಎಂದು ಈ ವೈದ್ಯ ತಂಡ ಹೇಳುತ್ತಿದೆ.

## ನಿದ್ರೆಯಲ್ಲಿ ನಡೆಯುವುದು ವಂಶವಾಹಿನಿಯ ಸಮಸ್ಯೆ

ರಾತ್ರೋರಾತ್ರಿ ಗಾಢವಾದ ನಿದ್ರೆಯಲ್ಲಿದ್ದ ವ್ಯಕ್ತಿ ಬಾವಿಯ ಬಳಿ ಹೋಗಿ ನಿಲ್ಲುವುದು ಅಥವಾ ಇನ್ಯಾರದ್ದೋ ಮನೆಯ ಮುಂದೆ ಹೋಗಿ ಮಲಗುವುದು, ಒಬ್ಬರೇ ಮಾತಾಡುತ್ತಾ ನಡೆಯುವುದು ಈ ಎಲ್ಲಾ ಘಟನೆಗಳಿಗೂ ವಂಶವಾಹಿನಿ ಕಾರಣ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಮಕ್ಕಳಲ್ಲಿ ಸಹಜವಾಗಿ ಕಂಡುಬರುವ ಈ ಕಾಯಿಲೆ, ಸಾಕಷ್ಟು ಪೋಷಕರ ನಿದ್ದೆಗೆಡಿಸಿರುವುದು ಸತ್ಯ. ಬಾಲ್ಯದಲ್ಲಿ ನಿರ್ಲಕ್ಷ್ಯ ತೋರಿದರೆ, ವಯಸ್ಕರಾಗುತ್ತಿದ್ದಂತೆ ಈ ಕಾಯಿಲೆ ಮತ್ತೊಂದು ರೀತಿಗೆ ತಿರುಗುತ್ತದೆ. ಜೊತೆಗೆ ಅನೇಕ ಆಘಾತಕಾರಿ ಅನಾಹುತಗಳೂ ನಡೆದುಹೋಗುವ ಸಾಧ್ಯತೆಗಳಿರುತ್ತವೆ.

ಅಮೆರಿಕದ ವಾಷಿಂಗ್‌ಟನ್ ವಿಶ್ವವಿದ್ಯಾಲಯದ ಕ್ರಿಸ್ಟೀನಾ ಗುರ್‌ನೆಟ್ ಹಾಗೂ ತಂಡ ನಿದ್ರೆಯಲ್ಲಿ ನಡೆಯುತ್ತಿರುವವರ ಕುರಿತು ಅಧ್ಯಯನ ಆರಂಭಿಸಿತು. ಒಂದೇ ಕುಟುಂಬದ ನಾಲ್ಕು ತಲೆಮಾರಿನವರಲ್ಲಿ ನಡೆಸಿದ ಸಂಶೋಧನೆಯಲ್ಲಿ 20ವಂಶವಾಹಿಗಳನ್ನು ಪರೀಕ್ಷೆಗೆ ಒಳಪಡಿಸಲಾಯಿತು. ನಿದ್ರೆಯಲ್ಲಿ ನಡೆಯುವ ದೋಷವಿರುವ ವ್ಯಕ್ತಿಯ ಡಿಎನ್‌ಎ ತನ್ನ ಮುಂದಿನ ತಲೆಮಾರಿಗೂ ವರ್ಗಾವಣೆಯಾಗುತ್ತಲೇ ಸಾಗುತ್ತಿರುವುದನ್ನು ಈ ವಿಜ್ಞಾನಿಗಳು ಪತ್ತೆ ಹಚ್ಚಿದ್ದಾರೆ. ಕೆಲವರಲ್ಲಿ ಇದರ ಪ್ರಮಾಣ ಶೇ50ರಷ್ಟು ಮಾತ್ರ ಇರುವುದೂ ಪತ್ತೆಯಾಗಿದೆ.

ಇಷ್ಟೇ ಅಲ್ಲದೆ, ದೋಷವಿರುವ ಡಿಎನ್‌ಎ ಪತ್ತೆ ಹಚ್ಚಿ ಅದಕ್ಕೆ ಹೊಸ ಔಷಧ ಹುಡುಕುವ ಕಾಯಕ ಇದೀಗಷ್ಟೇ ಪ್ರಾರಂಭವಾಗಿದೆ. ಇದು ಯಶಸ್ವಿಯಾದಲ್ಲಿ ಶೇ 10ರಷ್ಟು ಮಕ್ಕಳು ಹಾಗೂ ಪ್ರತಿ 50ರಲ್ಲಿ ಒಬ್ಬ ವಯಸ್ಕನಿಗೆ ಬರಬಹುದಾದ ನಿದ್ರೆಯಲ್ಲಿ ನಡೆಯುವ ಕಾಯಿಲೆ ದೂರವಾಗುವ ದಿನ ದೂರವಿಲ್ಲ.

## ಉದ್ಯಾನದಲ್ಲಿ ವ್ಯಾಯಾಮ ಉಪಯುಕ್ತ

ನಾಲ್ಕು ಗೋಡೆಗಳ ನಡುವಿಗಿಂತ ನಿಸರ್ಗದತ್ತವಾಗಿ ಬೆಳೆದ ಗಿಡ ಮರಗಳ ನಡುವೆ ವ್ಯಾಯಾಮ ಮಾಡುವುದು ಮಾನಸಿಕವಾಗಿ ಹಾಗೂ ಶಾರೀರಕವಾಗಿ ಉಪಯುಕ್ತ ಎಂದು ಐರೋಪ್ಯ ಸಂಶೋಧನಾ ತಂಡಗಳು ಹೇಳಿವೆ. ಈ ಪ್ರಯೋಗಕ್ಕಾಗಿ 833 ವಯಸ್ಕರನ್ನು ಬಳಸಿಕೊಳ್ಳಲಾಯಿತು. ಇವರಿಂದ 11 ವಿವಿಧ ಮಾದರಿಯ ಕಸರತ್ತುಗಳನ್ನು ಮಾಡಿಸಲಾಯಿತು.

ಇವರಲ್ಲಿ ಹೊರಾಂಗಣ ವ್ಯಾಯಾಮ ಹಾಗೂ ಒಳಾಂಗಣ ವ್ಯಾಯಾಮಗಳನ್ನು ಮಾಡುವವರಿಗೆ ಒಂದು ದೈಹಿಕ ಹಾಗೂ ಮಾನಸಿಕ ಕಸರತ್ತು ಮಾಡಲು ಹೇಳಲಾಯಿತು. ಫಲಿತಾಂಶವಾಗಿ, ಹೊರಾಂಗಣ ವ್ಯಾಯಾಮ ಮಾಡಿದವರಲ್ಲಿ ಮಾನಸಿಕವಾಗಿ ಸಾಕಷ್ಟು ಉಲ್ಲಾಸಭರಿತರಾಗಿದ್ದು ಕಂಡುಬಂತು. ಪ್ರಕೃತಿಯ ನಡುವೆ ಮಾಡಿದ ಮಾನಸಿಕ ಹಾಗೂ ದೈಹಿಕ ಕಸರತ್ತಿನಿಂದಾಗಿ ಅವರಲ್ಲಿ ಸಕಾರಾತ್ಮಕ ಮನೋಭಾವ ಹೆಚ್ಚಾಗಿತ್ತು. ಒತ್ತಡ ತಗ್ಗಿದ್ದು ಕಂಡುಬಂತು. ಸಿಟ್ಟು ಹಾಗೂ ಖಿನ್ನತೆ ದೂರವಾಗಿದ್ದು ಸಂಶೋಧಕರಲ್ಲಿ ಹೊಸ ಭರವಸೆ ಮೂಡಿಸಿತು.

ಈ ಫಲಿತಾಂಶದಿಂದ ಇದೀಗಷ್ಟೇ ಆರಂಭವಾಗಿರುವ ಗ್ರೀನ್ ಜಿಮ್ ಹಾಗೂ ಬ್ಲೂ ಜಿಮ್‌ಗಳಿಗೆ ಈ ಮತ್ತಷ್ಟು ಪುಷ್ಟಿ ಸಿಕ್ಕಂತಾಗಿದೆ. ಜಿಮ್‌ನ ನಾಲ್ಕು ಗೋಡೆಗಳ ಒಳಗೆ ಕೇವಲ ದೈಹಿಕ ಕಸರತ್ತು ಲಭಿಸುತ್ತದೆಯೇ ಹೊರತು, ಮನಸ್ಸಿಗೆ ಯಾವುದೇ ಬಗೆಯ ನವೋಲ್ಲಾಸ ದೊರಕದು ಎಂದು ಡಾ.ಜೊ ಥಾಂಪ್ಸನ್ ಅಭಿಪ್ರಾಯಪಡುತ್ತಾರೆ.

■ ಐಎಎಸ್‌ಎಸ್




# ಬಿಳಿ ಮಚ್ಚೆ

ಹೊಸದಾಗಿ ಸಂಶೋಧನೆ ಮಾಡಿರುವ ನಮ್ಮ ಔಷಧಿಯು 6 ರಿಂದ 8 ಗಂಟೆಗಳ ಒಳಗೆ ಮಚ್ಚೆಯಿರುವ ಜಾಗದ ಬಣ್ಣವನ್ನು ಬದಲಿಸುತ್ತದೆ. ತ್ವಚೆಗೆ ಶಾಶ್ವತವಾದ ಮೂಲ ಬಣ್ಣ ನೀಡುತ್ತದೆ. ಚಿಕಿತ್ಸೆಯಿಂದ ಪೂರ್ಣ ಅನುಕೂಲವಾಗುವ ಭರವಸೆಯಿರುವುದು. ಪೂರ್ಣ ಚಿಕಿತ್ಸೆಗಾಗಿ ತಕ್ಷಣ ಸಂಪರ್ಕಿಸಿ. ಯಾವುದೇ ಅನುಕೂಲ ಕಂಡುಬಾರದಿದ್ದರೆ, ಔಷಧಿ ಬೆಲೆ ಹಿಂದಿರುಗಿಸಲಾಗುವುದು.

# ಲೈಂಗಿಕ ಸಮಸ್ಯೆ



ಈಗ ಈ ಸಮಸ್ಯೆ ನಿವಾರಣೆಗೆ ಹೊಸ ಅವಿಷ್ಕಾರ ಆಗಿದೆ. ಖಾತರಿಯಾದ ಚಿಕಿತ್ಸೆಯಿದೆ. ಶೀಘ್ರಸ್ಖಲನ, ಸ್ವಪ್ನ ಸ್ಖಲನ, ನಪುಂಸಕತೆ, ಗೊನೋರಿಯಾ, ಸಿಫಿಲಿಸ್, ಬಂಜೆತನ ಅಥವಾ ಯಾವುದೇ ರೀತಿಯ ಲೈಂಗಿಕ ತೊಂದರೆ, ಜನನೇಂದ್ರಿಯದ ತೊಂದರೆಯನ್ನು ಪರಿಹರಿಸಲಾಗುವುದು. ತಕ್ಷಣ ಚಿಕಿತ್ಸೆಗಾಗಿ ನಮ್ಮನ್ನು ಸಂಪರ್ಕಿಸಿ

# ಆಕರ್ಷಕ ಸ್ತನಗಳು



ನಮ್ಮ ಆಯುರ್ವೇದಿಕ್ ಚಿಕಿತ್ಸೆ ಪಡೆಯುವ ಮೂಲಕ 28 ದಿನಗಳ ಒಳಗೆ ನಿಮ್ಮ ಸ್ತನಗಳನ್ನು ವಿನೀತ ಚೆಲುವು, ಆಕರ್ಷಕ ಮತ್ತು ಸುಂದರವಾಗಿ ಕಾಣುವಂತೆ ರೂಪಿಸಿಕೊಳ್ಳಿ. ಸಾಮಾನ್ಯ ಚಿಕಿತ್ಸೆದರ ರೂ.600/- ತುರ್ತುಚಿಕಿತ್ಸೆದರ ರೂ. 1500/-

**09934066680**
**09386023246**
**09934068051**
**07488136520**

Before purchasing medicine, see name & add of Trusted Vaidya Vijay Kumar